ಶ್ರೀ ಎಂ.ಕೆ. ಶ್ರೀರಂಗಯ್ಯ, ಭಾ.ಆ.ಸೇ.
ಯೋಜನಾ ನಿರ್ದೇಶಕರು
Sri M.K. Sreerangaiah, I.A.S
Project Director

KSAPS

ಸಂ.ಕರಾಏಪ್ರಸೊ/ಸಿಎಸ್‌ಟಿ/08/2016-17

ದಿನಾಂಕ 07.04.2020

ರವರಿಗೆ,

ಪೋಲೀಸ್ ಮಹಾ ನಿರ್ದೇಶಕರು,
ನಂ. 2, ನೃಪತುಂಗ ರಸ್ತೆ,
ಬೆಂಗಳೂರು-560001.

ಮಾನ್ಯರೇ,

ವಿಷಯ: ಹೆಚ್.ಐ.ವಿ.ಸೋಂಕಿತರಿಗೆ ಎ.ಆರ್.ಟಿ. ಚಿಕಿತ್ಸೆಯನ್ನು ಪಡೆಯಲು ಅನುಕೂಲ ಮಾಡಿಕೊಡುವ ಬಗ್ಗೆ.

ಉಲ್ಲೇಖ: ಮುಖ್ಯ ಕಾರ್ಯದರ್ಶಿಗಳು ಕರ್ನಾಟಕ ಸರ್ಕಾರದ ಸುತ್ತೋಲೆ ಸಂ. ಸಿಆಸುಇ 123 ಡಿಬಿಎಂ 2020 ದಿ. 2303.2020

*****

ಬೆಂಗಳೂರು ನಗರದಲ್ಲಿ ಮತ್ತು ರಾಜ್ಯದ ಇತರೆ ಪ್ರದೇಶಗಳಲ್ಲಿ ಪ್ರಸ್ತುತ ಕೊರೊನಾ ವೈರಾಣುವಿನ ಹರಡುವಿಕೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಉಲ್ಲೇಖಿತ ಸುತ್ತೋಲೆಯಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಗತ್ಯ ಸೇವೆಗಳನ್ನು ಸಾರ್ವಜನಿಕರಿಗೆ ತಪ್ಪದೇ ಒದಗಿಸಲು ಸೂಚಿಸಿರುತ್ತಾರೆ.

ರಾಜ್ಯದಲ್ಲಿ ಕೋವಿಡ್-19 ಪ್ರಯುಕ್ತ ಲಾಕ್‌ಡೌನ್, ನಿರ್ಬಂದನೆ ವಿಧಿಸಿರುವುದರಿಂದ, ಹೆಚ್.ಐ.ವಿ. ಸೋಂಕಿತರು ಪ್ರತಿ ತಿಂಗಳು ಎ.ಆರ್.ಟಿ. ಚಿಕಿತ್ಸೆಯನ್ನು ನಿಯಮಿತವಾಗಿ ಹಾಗೂ ಕಡ್ಡಾಯವಾಗಿ ಪಡೆಯಲು ತೊಂದರೆಯಾಗುತ್ತಿದೆ.

ಆದುದರಿಂದ, ಹೆಚ್.ಐ.ವಿ. ಸೋಂಕಿತರಿಗೆ ಆಸ್ಪತ್ರೆಗೆ ಹೋಗಲು ಅನುಕೂಲವಾಗುವಂತೆ ಅವರುಗಳ ಬಳಿಯಿರುವ ಹಸಿರು ಪುಸ್ತಕ – ಎ.ಆರ.ಟಿ. ಚಿಕಿತ್ಸೆಯ ರೆಕಾರ್ಡ ಪುಸ್ತಕವನ್ನು ಗುರುತಿನ ಚೀಟಿಯಂತೆ ಪರಿಗಣಿಸಿ ಅವರಿಗೆ ಆಸ್ಪತ್ರೆಗೆ ಹೋಗಲು ಅನುವು ಮಾಡಿಕೊಡಿಕೊಡುವಂತೆ, ಹಾಗೂ, ಈ ಹೆಚ್.ಐ.ವಿ. ಸೋಂಕಿತ ಕುಟುಂಬದ ಯಾವುದೇ ವ್ಯಕ್ತಿಯು ಹೆಚ್.ಐ.ವಿ. ಸೋಂಕಿತರ ಪರವಾಗಿ ಎ.ಆರ್.ವಿ. ಔಷಧಿಯನ್ನು ಸಂಗ್ರಹಣೆ ಮಾಡಲು ಆಸ್ಪತ್ರೆಗೆ ಹೋಗುವ ಅನಿವಾರ್ಯತೆ ಬಂದರೆ, ಹೆಚ್.ಐ.ವಿ. ಸೋಂಕಿತರಿಗೆ ಸಂಬಂಧಿಸಿದ ಹಸಿರು ಪುಸ್ತಕವನ್ನು ತೋರಿಸಿದರೆ ಅವರಿಗೆ ಯಾವುದೇ ರೀತಿಯ ತಡೆ ಮಾಡದಂತೆ ಅವರನ್ನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಮತ್ತು ಮಾತ್ರೆಗಳನ್ನು ಪಡೆಡಲು ಅನುವು ಮಾಡಿಕೊಳ್ಳಲು ರಾಜ್ಯದಲ್ಲಿನ ತಮ್ಮ ಅಧೀನದ ಎಲ್ಲಾ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ತಮ್ಮನ್ನು ಈ ಮೂಲಕ ಕೋರಲಾಗಿದೆ.

ತಮ್ಮ ವಿಶ್ವಾಸಿ,

7/4/2020



Scanned with CamScanner